# ಮಹಾವೃಕ್ಷದ ಅಳಿವು ಉಳಿವಿನ ರಾಜಕಾರಣ

ಮುಂದೆ ಉದ್ಯೋಗದ ನಿಮಿತ್ತ ಕಾನಿಷ್ಕ ಹೋಟೆಲ್‌ಗೆ ಕಾಫಿಗೋ ತಿಂಡಿಗೋ ತಿರುಗಾಡುತ್ತಿದ್ದಾಗ ಯಾರ ಯಾರ ಕಣ್ಣಿಗೋ ಬಿದ್ದು, ಮತ್ತೆ ಮತ್ತೆ ಯಾರ್ಯಾರೋ ಅಪರಿಚಿತರು ಈತನ ಕಡೆ ವಾರೆನೋಟ ಬೀರಿ, 'ಸಿನಿಮಾ ಸೇರುತ್ತೀಯಾ' ಎಂದು ಕರೆದು ಕೇಳಿದಾಗ ಆತನಿಗೇ ಆಶ್ಚರ್ಯ. ಅದೆಷ್ಟೋ ಜನ, ಅವಕಾಶವನ್ನು ಹುಡುಕಿಕೊಂಡು ನಾಡಿನ ಮೂಲೆಮೂಲೆಯಿಂದ ಮನೆಬಿಟ್ಟು ಓಡಿಬಂದು ಇಲ್ಲಿ ಬೇಕಾದ ಅವಕಾಶ ಸಿಗದೇ, ಲೈಟ್‌ಬಾಯ್ ಆಗಿಯೋ, ಸೈಡ್ ಆಕ್ಟರ್ ಆಗಿಯೋ, ಇಲ್ಲ ಕಮೆಡಿಯನ್ ಆಗಿಯೋ ಜೀವನ ಕಂಡುಕೊಂಡು ಅಲ್ಲಿಗೇ ಸಮಾಧಾನ ಪಟ್ಟುಕೊಂಡವರಿದ್ದಾರೆ. ಅಂಥಾದ್ದರಲ್ಲಿ ತನಗೆ ಹೀಗೆ ಮೇಲಿಂದ ಮೇಲೆ ಆಹ್ವಾನಗಳು ಬರುತ್ತಿದ್ದಾವೆಂದರೆ ಯಾವುದೋ ಶುಭ ಸೂಚನೆಯೇ ಇರಬಹುದು, ಯಾಕೆ ಪ್ರಯತ್ನಿಸಬಾರದು ಎಂದು ಒಮ್ಮೆ ಅನ್ನಿಸಿ ಕುತೂಹಲಕ್ಕೆಂದು ಮನೆಯವರಿಗೂ ಹೇಳದೇ ತನ್ನ ಕೆಲಸಕ್ಕೆ ಸುಳ್ಳು ಹೇಳಿ ರಜೆ ಹಾಕಿ ಒಂದು ಸಣ್ಣಚಿತ್ರದಲ್ಲಿ ನಟಿಸಿಯೇ ಬಿಟ್ಟ. ಅದು ಆತನ ನಿರೀಕ್ಷೆಗೂ ಮೀರಿ ಶತಕದವರೆಗೆ ಓಡಿ ಯಾರ ಯಾರ ಕಣ್ಣಿಗೋ ಬಿದ್ದುಬಿಟ್ಟ. ಮತ್ತೆ ಮತ್ತೆ ಅವಕಾಶಗಳು ಬರಲಾರಂಭಿಸಿದ ಮೇಲೆ ತನ್ನ ಆ ಪುಟಗೋಸಿ ಕೆಲಸಕ್ಕೆ ರಾಜೀನಾಮೆ ಬಿಸಾಕಿ ಇಲ್ಲೇ ಅದೃಷ್ಟ ಪರೀಕ್ಷಿಸುವುದೆಂದು ನಿರ್ಧರಿಸಿಬಿಟ್ಟ.

ಸಿಕ್ಕಸಿಕ್ಕ ಸಿನಿಮಾಗಳಿಗೆಲ್ಲ ಒಪ್ಪದೇ, ಆರು ತಿಂಗಳಿಗೊಂದು ವರ್ಷಕ್ಕೊಂದು ಸಿನಿಮಾದಲ್ಲಷ್ಟೇ ನಟಿಸುತ್ತ, ನಿಧಾನಕ್ಕೆ ನಟನೆಯನ್ನು ಕಲಿಯುತ್ತಾ ನಡೆದ. ನನ್ನ ಆಶೀರ್ವಾದ ಪೂರ್ತಿ ಅವನಿಗಿತ್ತು. ಅವನಿಗಷ್ಟೇ ಏನು ಅವನ ತಾತ, ಮುತ್ತಾತ, ಮರಿಮುತ್ತಾತನಿಂದ ಎಲ್ಲರೂ ನನ್ನ ಮಕ್ಕಳಿದ್ದಂತೆಯೇ ತಾನೇ. ಇವರ ಮೂಲ ಪುರುಷ ಕಾಳಿಂಗನನ್ನು ಆಕ್ರೋಶಿತರಾಗಿದ್ದ ಊರವರಿಂದ ನಾನೇ ತಾನೇ ರಕ್ಷಿಸಿ, ನಂತರ ಆಶ್ರಯ ಅರಸಿ ನನ್ನೆಡೆಗೆ ಬಂದು ಮನೆ ಮಾಡಿಕೊಂಡಾಗಲೂ ಸಾಕಿ ಸಲಹಿದ್ದು. ಕಾಳಿಂಗನ ಎಂಟನೆಯದೋ,

